# ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ

# Directorate of Medical Education.

ಆನಂದರಾವ್ ವೃತ್ತ, ಬೆಂಗಳೂರು-9

Ananda Rao Circle, Bangalore-9

email: dmekarnataka@yahoo.com

Ph: 080 22870060


ಸಂಖ್ಯೆ: ವೈಶಿನಿ/ಎನ್‌ಆರ್‌ಸಿ(2)/13/2016-17

ದಿನಾಂಕ: 26-10-2017

**ಸುತ್ತೋಲೆ**

**ವಿಷಯ:-** 2017-18ನೇ ಸಾಲಿಗೆ ಬಿ.ಎಸ್ಸಿ, ಪಿ.ಬಿ.ಬಿ.ಎಸ್ಸಿ ಮತ್ತು ಎಂ.ಎಸ್ಸಿ. ನರ್ಸಿಂಗ್ ಕೋರ್ಸ್‌ಗೆ ಸರ್ಕಾರಿ ಕೋಟಾದಡಿಯಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳಿಂದ ನಿಗದಿತ ಶುಲ್ಕವನ್ನು ಮಾತ್ರ ವಸೂಲಿ ಮಾಡುವ ಬಗ್ಗೆ.

**ಉಲ್ಲೇಖ:-** ತಮ್ಮ ಪತ್ರ ಸಂಖ್ಯೆ: ಸಕಇಪ.ಪೂ.ತ.ಕೇ/ಸಿಆರ್/ನರ್ಸಿಂಗ್/2017-18, ದಿನಾಂಕ: 16-10-2017

* * * * *

ಉಲ್ಲೇಖಿತ ಪತ್ರದಲ್ಲಿ 2017-18ನೇ ಸಾಲಿಗೆ ಸಮಾಜ ಕಲ್ಯಾಣ ಇಲಾಖಾ ವತಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳನ್ನು ಬಿ.ಎಸ್ಸಿ, ಪಿ.ಬಿ.ಬಿ.ಎಸ್ಸಿ ಮತ್ತು ಎಂ.ಎಸ್ಸಿ. ನರ್ಸಿಂಗ್ ಕೋರ್ಸ್‌ಗೆ ನಿಯೋಜಿಸುವ ಸಲುವಾಗಿ ಸರ್ಕಾರಿ ಕೋಟಾದಲ್ಲಿ ಖಾಲಿ ಉಳಿದಿರುವ ಸೀಟುಗಳನ್ನು ನೀಡುವಂತೆ ಹಾಗೂ ಸರ್ಕಾರದ ವತಿಯಿಂದ ನಿಯೋಜಿಸುವ ಅಭ್ಯರ್ಥಿಗಳಿಗೆ ಪ್ರವೇಶಾವಕಾಶ ಕಲ್ಪಿಸುವಂತೆ ಎಲ್ಲಾ ಸಂಸ್ಥೆಗಳಿಗೆ ಸೂಚನೆ ನೀಡುವಂತೆ ಕೋರಲಾಗಿರುತ್ತದೆ.

2017-18ನೇ ಸಾಲಿನಲ್ಲಿ ಜಿ.ಎನ್.ಎಂ. ಬಿ.ಎಸ್ಸಿ, ಎಂ.ಎಸ್ಸಿ. ನರ್ಸಿಂಗ್ ಕೋರ್ಸ್ ಮತ್ತು ಬಿ.ಪಿ.ಟಿ. ಎಂಪಿ.ಟಿ ವ್ಯಾಸಾಂಗಕ್ಕೆ ಸರ್ಕಾರಿ ಕೋಟಾದಡಿಯಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳಿಂದ ಅಧಿಕ ಶುಲ್ಕ ಒತ್ತಾಯ ಮಾಡುತ್ತಿರುವುದು ಈ ನಿರ್ದೇಶನಾಲಯದ ಗಮನಕ್ಕೆ ಬಂದಿರುತ್ತದೆ.

ಆದುದರಿಂದ ಸರ್ಕಾರಿ ಕೋಟಾದಡಿಯಲ್ಲಿ ಆಯ್ಕೆಯಾಗಿರುವ ಜಿ.ಎನ್.ಎಂ. ಬಿ.ಎಸ್ಸಿ, ಎಂ.ಎಸ್ಸಿ. ನರ್ಸಿಂಗ್ ಕೋರ್ಸ್ ಮತ್ತು ಬಿ.ಪಿ.ಟಿ. ಎಂಪಿ.ಟಿ ವ್ಯಾಸಾಂಗಕ್ಕೆ ಅಭ್ಯರ್ಥಿಗಳಿಂದ ಸರ್ಕಾರ ನಿಗದಿ ಪಡಿಸಿರುವ ಶುಲ್ಕವನ್ನು ಮಾತ್ರ ಪಡೆದು ಪ್ರವೇಶ ನೀಡುವಂತೆ ಸೂಚಿಸಲಾಗಿದೆ. ಒಂದು ವೇಳೆ ಅಧಿಕ ಶುಲ್ಕ ಒತ್ತಾಯ ಮಾಡುವುದು ಮತ್ತೆ ಈ ನಿರ್ದೇಶನಾಲಯದ ಗಮನಕ್ಕೆ ಬಂದಲ್ಲಿ ಅಂತಹ ಸಂಸ್ಥೆಗಳ ಸಂಯೋಜನೆ ರದ್ದುಪಡಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗುವುದು.

26/10

ನಿರ್ದೇಶಕರು, ವೈದ್ಯಕೀಯ ಶಿಕ್ಷಣ.

**ಪ್ರತಿಯನ್ನು:-**

1. ರಿಜಿಸ್ಟ್ರಾರ್, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, 4ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು-41. ಇವರಿಗೆ ಕಳುಹಿಸುತ್ತಾ ಸದರಿ ಸುತ್ತೋಲೆಯನ್ನು ತಮ್ಮ ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವಂತೆ ಕೋರಿದೆ.
2. ಸಂಬಂಧಪಟ್ಟ ಸಂಸ್ಥೆಯ ಪ್ರಾಂಶುಪಾಲರುಗಳಿಗೆ.

Webserver + PGET + Affi(N)C + PA to VC RGU

website display